# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಲಗ್ಗೆರೆ ಉಪವಿಭಾಗ, 1ನೇ ಮುಖ್ಯರಸ್ತೆ, 3ನೇ ಬ್ಲಾಕ್, ಝೂನ್ ಪಾರ್ಕ್ ಕಾಂಪೌಂಡ್, ನಾಗರಬಾವಿ 2ನೇ ಹಂತ, ಬೆಂಗಳೂರು-560 072

**ವಾರ್ಡ್ ಸಂಖ್ಯೆ 69 ರಲ್ಲಿ ದಿನಾಂಕ:-06.03.2021 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.**

ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

1. ಶ್ರೀ ನಾಗೇಶ್ ಮೂರ್ತಿ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ ರೋಹಿತ್.ಜೆ, ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ
3. ಶ್ರೀ ದಿವ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಸದಸ್ಯರು.
4. ಶ್ರೀ ವರದರಾಜು, ಕಿ.ಆ.ಪ, ವಾರ್ಡ್ ನಂ.69.
5. ಶ್ರೀ ಪಿ.ಎನ್.ರುದ್ರೇಶಯ್ಯ, ಬಿ.ಡಬ್ಲ್ಯೂ.ಎಸ್.ಎಸ್.ಬಿ, (ಕೆಲಸ ಪರಿವೀಕ್ಷಕರು).
6. ಶ್ರೀ. ಪಿ.ಹೆಚ್.ನಾರಾಯಣಸ್ವಾಮಿ, ಬೆಸ್ಕಾಂ (ಕೆಲಸ ಪರಿವೀಕ್ಷಕರು)
7. ಶ್ರೀ.ಗೋವಿಂದಯ್ಯ, ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್, ನಂದಿನಿ ಲೇಔಟ್ ಪೋಲೀಸ್ ಠಾಣೆ.
8. ಶ್ರೀ ಕೃಷ್ಣಪ್ಪ, ಪೋಲೀಸ್ ಇನ್ಸ್‌ಪೆಕ್ಟರ್, ನಂದಿನಿ ಲೇಔಟ್ ಪೋಲೀಸ್ ಠಾಣೆ.
9. ಶ್ರೀ.ವಿನಾಯಕ ದತ್ತ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
10. ಶ್ರೀ.ನಾರಾಯಣಸ್ವಾಮಿ ಪಿ.ಹೆಚ್ (ಕೆಲಸ ಪರಿವೀಕ್ಷಕರು ) ಬೆಸ್ಕಾಂ,
11. ಶ್ರೀ.ರಂಗಸ್ವಾಮಿ (ಕೆಲಸ ಪರಿವೀಕ್ಷಕರು ) ಬೆಸ್ಕಾಂ

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

**1) ಹಿಂದಿನ ಸಭೆಯ ನಡವಳಿಗಳಲ್ಲಿದ್ದ ವಿಷಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ಓದಿ ರೆಕಾರ್ಡ್ ಮಾಡಿರುವುದು.**

| ಕ್ರ ಸಂ | ವಿಷಯ ಸೂಚಿ | ಚರ್ಚಿಸಿದ ವ್ಯಕ್ತಿಯ ಹೆಸರು ಮತ್ತು ದೂರವಾಣಿ ಸಂಖ್ಯೆ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|---|
| 1 | ವಾರ್ಡ್‌ಗೆ ಸಂಬಂಧಪಟ್ಟಂತೆ ಆಲದಮರ, ಬಿ.ಎಂ.ಟಿ.ಎಸ್ ಬಸ್ ಡಿಪೋ ಹತ್ತಿರ ರಸ್ತೆ ಗುಂಡಿಗಳಿದ್ದು, ಅವುಗಳನ್ನು ಶೀಘ್ರವಾಗಿ ಮುಚ್ಚುವಂತೆ ಶ್ರೀ. ಶಿವಣ್ಣಗೌಡ ರವರು ತಿಳಿಸಿರುತ್ತಾರೆ. | - | ಕಾಮಗಾರಿ ಪ್ರಗತಿಯಲ್ಲಿದೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಲಗ್ಗೆರೆ ಉಪ ವಿಭಾಗ) |
| 2 | ವಾರ್ಡ್ ವ್ಯಾಪ್ತಿಯ ಲವಕುಶನಗರಕ್ಕೆ ಸಂಬಂಧಪಟ್ಟಂತೆ ಕಲ್ವರ್ಟ್‌ನ ಸ್ಲ್ಯಾಬ್ ಕಂಬಿಗಳು ದುರಸ್ಥಿಗೊಂಡಿದ್ದು, ಅದನ್ನು ಸರಿಪಡಿಸುವಂತೆ ಶ್ರೀ. ಕೃಷ್ಣಮೂರ್ತಿ ರವರು ತಿಳಿಸಿರುತ್ತಾರೆ. | | ಕಾಮಗಾರಿ ಮುಗಿದಿದೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಲಗ್ಗೆರೆ ಉಪ ವಿಭಾಗ) |

| | | | | |
|---|---|---|---|---|
| 3 | ಸದರಿ ವಾರ್ಡ್‌ನ ಸ್ವತಂತ್ರ್ಯಯೋಧನಗರ 5ನೇ ಕ್ರಾಸ್ ಹಾಗೂ ರಾಜೀವ್‌ಗಾಂಧಿನಗರಗಳಲ್ಲಿ ಸ್ಲಿಲ್ಪ್‌ಗಳನ್ನು ತೆಗಸುವಂತೆ ಶ್ರೀ.ಸಂತೋಷ್ ಗೌಡ ರವರು ತಿಳಿಸಿರುತ್ತಾರೆ. | | ಕಾಮಗಾರಿ ಮುಗಿದಿದೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಲಗ್ಗೆರೆ ಉಪ ವಿಭಾಗ) |

**2) ವಾರ್ಡ್ ಸಮಿತಿಯನ್ನು ರಚಿಸುವ ಬಗ್ಗೆ ಚರ್ಚಿಸುವುದು.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಾರ್ಡ್ ಸಮಿತಿ ರಚಿಸಲು ಸಭೆಯಲ್ಲಿ ಚರ್ಚಿಸಲಾಗಿದ್ದು ಹಾಗೂ ಈ ಕೆಳಕಂಡ ಎಂಟು ಜನರನ್ನು ಸಮಿತಿಯ ಸದಸ್ಯರನ್ನಾಗಿ ಸರ್ವಾನುಮತದಿಂದ ಅಂಗೀಕರಿಸಲಾಯಿತು.

| ಕ್ರ.ಸಂ | ಪ್ರದೇಶ | ಸದಸ್ಯರ ಹೆಸರು | ನಾಗರೀಕ ಕಲ್ಯಾಣ ಸಂಘದ ಹೆಸರು |
|---|---|---|---|
| 1 | ಕೆಂಪೇಗೌಡ ಬಡಾವಣೆ | ಸಿದ್ದೇಗೌಡ ಹೆಚ್.ಎಸ್ | ಸಾಮಾಜಿಕ ಕಾರ್ಯಕರ್ತರು |
| 2 | ಲಗ್ಗರೆ | ಶ್ರೀಮತಿ ಗಾಯತ್ರಿ ಎಸ್.ಜಿ | ಸ್ತ್ರೀ ಶಕ್ತಿ ಸಂಘದ ಅಧ್ಯಕ್ಷರು |
| 3 | ಮುನಿಬಚ್ಚಮ್ಮ ಆಶ್ರಮ | ಶ್ರೀ ರಾಜಗೋಪಾಲ ಎ | ಸ್ವಯಂ ಸೇವಾ ಸಂಘದ ಕಾರ್ಯಕರ್ತರು. |
| 4 | ಮುನೇಶ್ವರ ಬಡಾವಣೆ | ಶ್ರೀ ನಿರಂಜನ್ ಆರ್ | ಸ್ವಯಂ ಸೇವಾ ಸಂಘದ ಕಾರ್ಯಕರ್ತರು. |
| 5 | ಲಗ್ಗರೆ | ಶ್ರೀ ಶ್ರೀನಿವಾಸ | ಸಾಮಾಜಿಕ ಕಾರ್ಯಕರ್ತರು |
| 6 | ಲಗ್ಗರೆ ಗ್ರಾಮ | ಶ್ರೀ ಜಿ ಬೋರಯ್ಯ | ಸಾಮಾಜಿಕ ಕಾರ್ಯಕರ್ತರು |
| 7 | ಎಫ್ ಎಫ್ ಬಡಾವಣೆ | ಶ್ರೀ ಪ್ರಕಾಶ್ | ಸಾಮಾಜಿಕ ಕಾರ್ಯಕರ್ತರು |
| 8 | ಕೆಂಪೇಗೌಡ ಬಡಾವಣೆ | ಶ್ರೀ ಬಾಬು | ಸಾಮಾಜಿಕ ಕಾರ್ಯಕರ್ತರು |

**3) ವಾರ್ಡ್ ವ್ಯಾಪ್ತಿಯಲ್ಲಿನ ಕಾಮಗಾರಿಗಳು ಮತ್ತು ರಸ್ತೆ ಗುಂಡಿಗಳ ದುರಸ್ಥಿಪಡಿಸುವ ಬಗ್ಗೆ ಚರ್ಚಿಸುವ ವಿಚಾರ.**

1. ವಾರ್ಡ್ ವ್ಯಾಪ್ತಿಯ ನರಸಿಂಹಸ್ವಾಮಿ ಬಡಾವಣೆ, ಮುನಿಬಚ್ಚಮ್ಮ ಬಡಾವಣೆ ಹಾಗೂ ಹಳೇವೂರು ರಸ್ತೆ ಗುಂಡಿಗಳನ್ನು ಮುಚ್ಚುವಂತೆ ಶ್ರೀ.ಕೃಷ್ಣಮೂರ್ತಿ ರವರು ತಿಳಿಸಿರುತ್ತಾರೆ.

**4) ವಾರ್ಡ್ ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಾಮಗಾರಿಗಳಾದ ಕುಡಿಯುವ ನೀರು ಮತ್ತು ಒಳಚರಂಡಿಯ ಬಗ್ಗೆ ಚರ್ಚಿಸುವ ವಿಚಾರ.**

1. ಸದರಿ ವಾರ್ಡ್‌ನ ನರಸಿಂಹಸ್ವಾಮಿ ಬಡಾವಣೆ 4ನೇ ಅಡ್ಡರಸ್ತೆ, ಬೋರ್‌ವೆಲ್‌ಗಳ ಕರೆಂಟ್ ಹೊಡಯುತ್ತಿದ್ದು ಮತ್ತು ಹಾಳಾಗಿದ್ದು, ಅವುಗಳನ್ನು ಶೀಘ್ರವಾಗಿ ಸರಿಪಡಿಸುವಂತೆ ಶ್ರೀ. ಮೂರ್ತಿ ರವರು ತಿಳಿಸಿರುತ್ತಾರೆ.
2. ಲಗ್ಗೆರೆ ಮುಖ್ಯರಸ್ತೆ, 13ನೇ ಕ್ರಾಸ್, ಭೈರವೇಶ್ವರ ನಗರ ಸುತ್ತುಮುತ್ತಲು ಸ್ಯಾನಿಟರಿ ಪೈಪ್‌ಗಳು ಹೊಡೆದುಹೋಗಿದ್ದು, ಅವುಗಳನ್ನು ಸರಿಪಡಿಸುವಂತೆ ಶ್ರೀಮತಿ.ಗಾಯಿತ್ರಿ ಮತ್ತು ಶ್ರೀ.ವಿಶ್ವಮೂರ್ತಿ ರವರು ತಿಳಿಸಿರುತ್ತಾರೆ.

3. ನರಸಿಂಹಸ್ವಾಮಿ ಬಡಾವಣೆ ಸಾರ್ವಜನಿಕರು ಸರಿಯಾದ ಸಮಯಕ್ಕೆ ಕುಡಿಯುವ ನೀರನ್ನು ಬಿಡದೇ ತೊಂದರೆಯಾಗುತ್ತಿರುವ ಬಗ್ಗೆ ಶ್ರೀ.ಬಾಬು ರವರ ಸಾರ್ವಜನಿಕರ ಪರವಾಗಿ ತಿಳಿಸಿರುತ್ತಾರೆ.

4. ಮುನೇಶ್ವರ ಬಡಾವಣೆ ಸುತ್ತಮುತ್ತಿಲಿನ ಪ್ರದೇಶಗಳಲ್ಲಿ ಬೋರ್‌ವೆಲ್‌ಗಳ ಟ್ಯಾಂಕ್‌ಗಳು ಹಾಳಾಗಿದ್ದು, ಅದರಿಂದ ನೀರು ಸರಿಯಾಗಿ ಬರುತ್ತಿಲ್ಲವಾದ್ದರಿಂದ ಅದನ್ನು ಕೂಡಲೇ ತೆಗೆಯುವಂತೆ ಶ್ರೀಮತಿ.ಕಾಂಚನಾ ರವರು ತಿಳಿಸಿರುತ್ತಾರೆ.

**5) ವಾರ್ಡ್ ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ಬೆಸ್ಕಾಂ ಹಾಗೂ ಬಿ.ಬಿ.ಎಂ.ಪಿ (ವಿದ್ಯುತ್) ಗಳ ಬಗ್ಗೆ ಚರ್ಚಿಸುವ ವಿಚಾರ.**

1. ಸದರಿ ವಾರ್ಡ್‌ನ ಮುನೇಶ್ವರ ಬಡಾವಣೆ ಮತ್ತು ಇತರೆ ರಸ್ತೆಗಳಲ್ಲಿ ಬೀದಿ ದೀಪಗಳು ಕರೆಂಟ್ ಹೊಡಯುತ್ತಿದ್ದು, ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲವೆಂದು ಅವುಗಳನ್ನು ಶೀಘ್ರವಾಗಿ ಸರಿಪಡಿಸುವಂತೆ ಶ್ರೀ.ವಿಶ್ವಮೂರ್ತಿ ಮತ್ತು ಚಂದ್ರಶೇಖರ್ ರವರು ತಿಳಿಸಿರುತ್ತಾರೆ.

**6) ವಾರ್ಡ್ ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ಕಂದಾಯ ಅಧಿಕಾರಿ (ಲಗ್ಗೆರೆ ಉಪವಲಯ) ಗಳ ಬಗ್ಗೆ ಚರ್ಚಿಸುವ ವಿಚಾರ.**

1. ಸದರಿ ವಾರ್ಡ್‌ನ ಮೌಂಟ್ ಸಿನಾರಿಯಾ ಸ್ಕೂಲ್ ಬಳಿ ಹಾಗೂ ಸುತ್ತ ಮುತ್ತಲಿನ ಪ್ರದೇಶದಲ್ಲಿ ಅಹಿತಕರ ಘಟನೆಗಳು ನಡೆಯುತ್ತಿರುವುದರಿಂದ ಈ ಕೂಡಲೇ ಸ್ವತ್ತಿಗೆ ಸಂಬಂಧಪಟ್ಟ ಮಾಲೀಕರನ್ನು ಪತ್ತೆ ಹಚ್ಚುವಂತೆ ಶ್ರೀ.ಮೂರ್ತಿ ರವರು ತಿಳಿಸಿರುತ್ತಾರೆ.

**ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು.**

ಮುಂದಿನ ಸಭೆಯಲ್ಲಿ ಸಾಧಿಸಬೇಕಾದ ಗುರಿ ಹಾಗೂ ಸಾಧನೆ ಬಗ್ಗೆ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 69 ಲಗ್ಗೆರೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ವಾರ್ಡ್ ನಂ. 69 ಲಗ್ಗೆರೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ